(73)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 19-05-2016ರಂದು ನಡೆಸಲಾದ ಸಭೆಯ ನಡವಳಿಗಳು

ವಿಷಯ ಸಂಖ್ಯೆಃ ಬೃ.ಸಾ.ಕಾ.ಸ್ಥಾ.ಸ:/ 08 /2016-17

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Construction of Seating Gallery at Swami Vivekananda Park at Yelahanka Newtown ಕಾಮಗಾರಿಯ ಅಂದಾಜುಪಟ್ಟಿಯ ಮೊತ್ತ ರೂ. 50.00 ಲಕ್ಷಗಳು, ಎಂಬ ಕಾಮಗಾರಿಯನ್ನು ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ನಗರ ಸಭೆ ಮತ್ತು ಪುರ ಸಭೆಗಳ ವಿಶೇಷ ಅನುದಾನದಲ್ಲಿ ಪಿ ಕೋಡ್ ಸಂಖ್ಯೆ: ಪಿ3089 ರಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗೆ ಜಾಬ್‌ಕೋಡ್ ಸಂಖ್ಯೆ: 004-16-000003 ದೊರೆತಿರುತ್ತದೆ. ಸದರಿ ಕಾಮಗಾರಿಗೆ 2015-16ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಗಳನ್ವಯ ಅತ್ಯವಶ್ಯಕ ಅಂಶಒಳಗೊಂಡಂತೆ ಅಂದಾಜು ಪಟ್ಟಿಯನ್ನು ರೂ. 50.00 ಲಕ್ಷಗಳಿಗೆ ತಯಾರಿಸಲಾಗಿದೆ.

ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಯೋಜನೆ-ಯಲಹಂಕ ವಿಭಾಗ ರವರು ದಿನಾಂಕ: 24-02-2016ರಂದು ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ಬಿಡ್‌ಅನ್ನು ದಿನಾಂಕ: 24-03-2016ರಂದು ತೆರೆದಿರುತ್ತಾರೆ. ಸದರಿ ಟೆಂಡರ್‌ನಲ್ಲಿ ನಾಲ್ಕು ಬಿಡ್‌ದಾರರು ಭಾಗವಹಿಸಿದ್ದು, ಅದರಲ್ಲಿ ಇಬ್ಬರು ಬಿಡ್‌ದಾರರು ಮಾತ್ರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

1. ಶ್ರೀ. ಗಜಲಗೂಡು ತೋಪೆಗೌಡ ರಾಜೇಗೌಡ.
2. ಶ್ರೀ. ಕೃಷ್ಣಪ್ಪ.ಟಿ (ಮೆ:ಶ್ರಾವಣಿ ಕನ್ಸ್‌ಟ್ರಕ್ಷನ್ಸ್).

ಆದ್ದರಿಂದ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಅರ್ಹ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲು ಅನುಮೋದಿಸಿರುವುದರಿಂದ ದಿನಾಂಕ: 02-04-2016ರಂದು ಅರ್ಹ ಬಿಡ್‌ದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ	ಗುತ್ತಿಗೆದಾರರು ನಮೂದಿಸಿದ ಮೊತ್ತ	ಶೇಕಡವಾರು 2015-16ನೇ ಸಾಲಿನ ಎಸ್.ಆರ್.ದರಗಳಂತೆ.
1	ಶ್ರೀ.ಗಜಲಗೂಡು ತೋಪೆಗೌಡ ರಾಜೇಗೌಡ.	48,52,456.61	54,91,938.09	13.18% ಹೆಚ್ಚು
2	ಶ್ರೀ.ಕೃಷ್ಣಪ್ಪ.ಟಿ (ಮೆ:ಶ್ರಾವಣಿ ಕನ್ಸ್‌ಟ್ರಕ್ಷನ್ಸ್).	48,52,456.61	62,95,637.20	29.74% ಹೆಚ್ಚು

ಸದರಿ ಬಿಡ್‌ದಾರರು ನಮೂದಿಸಿರುವ ದರಗಳು ಹೆಚ್ಚಾಗಿರುವುದರಿಂದ, ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ದರ ಸಂಧಾನ ನಡೆಸಲು ಸೂಚಿಸಿರುವ ಮೇರೆಗೆ, ಸದರಿ ಬಿಡ್‌ದಾರರೊಂದಿಗೆ ಕಾರ್ಯಪಾಲಕ ಅಭಿಯಂತರರು, ಯೋಜನೆ-ಯಲಹಂಕ ವಿಭಾಗ ರವರು ದರ ಸಂಧಾನ ನಡೆಸಿದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

72

ಕ್ರ. ಸಂ.	ಗುತ್ತಿಗೆದಾರರ ಹೆಸರು	ಗುತ್ತಿಗೆದಾರರು ನಮೂದಿಸಿದ ಮೊತ್ತ	ಗುತ್ತಿಗೆದಾರರು ದರ ಸಂಧಾನದ ನಂತರ ನಮೂದಿಸಿದ ಮೊತ್ತ	ಶೇಕಡವಾರು 2015–16ನೇ ಸಾಲಿನ ಅನುಮೋದಿತ ದರಗಳಂತೆ.	ಶೇಕಡವಾರು 2015–16ನೇ ಸಾಲಿನ ಪರಿಷ್ಕೃತ ದರಗಳಂತೆ.
1	ಶ್ರೀ.ಗಜಲಗೂಡು ತೋಪೆಗೌಡ ರಾಜೇಗೌಡ.	54,91,938.09	54,23,174.00	13.18% ಹೆಚ್ಚು	11.76% ಹೆಚ್ಚು

ಸದರಿ ಕಾಮಗಾರಿಯು ಸಾರ್ವಜನಿಕರ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಆರ್ಥಿಕ ವರ್ಷವು ಮುಕ್ತಾಯವಾಗುತ್ತಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಮಂಜೂರಾತಿ ನಿರೀಕ್ಷಿಸಿ, ಟೆಂಡರ್ ಕರೆಯಲಾಗಿರುವುದರಿಂದ, ಈಗ ಸದರಿ ಕಾಮಗಾರಿಯ ರೂ. 50.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ಕನಿಷ್ಠ ಬಿಡ್‌ದಾರರಾದ ಶ್ರೀ.ಗಜಲಗೂಡು ತೋಪೆಗೌಡ ರಾಜೇಗೌಡ ರವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತವಾದ ರೂ. 54,23,174.00 ಗಳನ್ನು ಅನುಮೋದನೆ ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ದಿನಾಂಕ:04–05–2016ರ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

ದಿನಾಂಕ:17-05-2016 ರ ಸಭಾ ನಿರ್ಣಯ:-
ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:04-05-2016
ರ ಟಿಪ್ಪಣಿಯಲ್ಲಿ ಕಂಡಿರುವ ಷರತ್ತುಗಳಿಗೆ ಒಳಪಟ್ಟು ಕ್ರಮವಹಿಸಲಾಗಿತು.

ಅಧ್ಯಕ್ಷರು
ಬೃ. ಸಾ. ಕಾ. ಸ್ಥಾ. ಸ.

ಕ್ರ ಸಂ.	ಹೆಸರು ಮತ್ತು ಪದನಾಮ		ಸಹಿ
1	ಕೆ.ದೇವದಾಸ್	ಅಧ್ಯಕ್ಷರು	
2	ಮಹದೇವಮ್ಮ ನಾಗರಾಜ್	ಸದಸ್ಯರು	ಮಹದೇವಮ್ಮ ನಾಗರಾಜ್

ಸಂ.	ಹೆಸರು ಮತ್ತು ಪದನಾಮ		ಸಹಿ
3	ಪಿ.ಸೌಮ್ಯ	ಸದಸ್ಯರು	Soumya. P
4	ಅಬ್ದುಲ್ ವಾಜಿದ್	ಸದಸ್ಯರು	
5	ಇರ್ಷಾದ್ ಬೇಗಂ	ಸದಸ್ಯರು	Irshad Begum
6	ಆರ್.ರಮಿಳ ಉಮಾಶಂಕರ್	ಸದಸ್ಯರು	Ramila umashankar
7	ಹನುಮಂತಯ್ಯ	ಸದಸ್ಯರು	
8	ಸುಪ್ರಿಯಾ ಶೇಖರ್	ಸದಸ್ಯರು	Supriya Shekar
9	ಆರ್.ರೇಖಾ	ಸದಸ್ಯರು	
10	ಎಂ.ಮಾಲತಿ	ಸದಸ್ಯರು	
11	ಡಾ: ಎಸ್.ರಾಜು	ಸದಸ್ಯರು	